**Order Sheet**
**In the Court Of: PRL. CIVIL JUDGE AND JMFC BELAGAVI**
**AT BELGAUM**
**F.R.No:O.S./901/2013**
**Case Reg.No: O.S./900/2013**

| **Plaintiff** | V E R S U S | **Defendent** |
|---|---|---|

---

| | |
|---|---|
| **1)Shri. Mahadev So. Kashappa Kamoji** | **1)Shri. Rajendra So. Basavaraj Bellad** |

ಓ.ಎಸ್ ನಂಃ 900 ಃ 2013
**ಡಿ. ಡಬ್ಲೂ- 1**

ದಿ. 06-10-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಪಾಟೀ ಸವಾಲುಃ ಶ್ರೀ. ಬಿ ಬಿ ಪಿ ವಕೀಲರಿಂದ ಃ-**

ನನ್ನ ತಂದೆ ವಕೀಲರ ವೃತ್ತಿಯನ್ನು ಸಿವಿಲ್ ಮತ್ತು ಕ್ರಿಮಿನಲ್ ಕಡೆ ಮಾಡುತ್ತಿದ್ದರು . ನಾನು 1988 ರಿಂದ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ . ದಾವ ಸ್ವತ್ತನ್ನು ನಮ್ಮ ತಂದೆ ಜಕ್ಕೂಬಾಯಿ ಸಿಧ್ರಾಯಿ ಯಳ್ಳೂರಕರವರಿಂದ 1966 ರಲ್ಲಿ ಖರೀದಿಸಿದ್ದರು ಅಂದರೆ ಸರಿ. ಜಕ್ಕೂಬಾಯಿ ಸಿಧ್ರಾಯಿ ಯಳ್ಳೂರಕರವರು ಅಂದಾಜು 2 ಎಕರೆಯನ್ನು ರಜಪೂತ ಎನ್ನುವವರಿಂದ ಖರೀದಿಸಿದ್ದರು. ಸದರಿ ಸ್ವತ್ತು ಕೃಷಿಭೂಮಿ ಆಗಿರುತ್ತದೆ ಅಂದರೆ ಸರಿ. ಅದರ ಚೆಕ್ಕಬಂದಿ ನನಗೆ ಹೇಳಲು ಆಗುವುದಿಲ್ಲ. ಅದರ ಖರೀದಿ ಮೌಲ್ಯ ಮತ್ತು ದಿನಾಂಕ ನನಗೆ ಗೊತ್ತಿಲ್ಲ. ರಜಪೂತರವರಿಗೆ 2 ಎಕರೆ ಹೊರತು ಪಡಿಸಿ ಎಷ್ಟು ಸ್ವತ್ತು ಇತ್ತು ಎಂದು ನನಗೆ ತಿಳಿದಿಲ್ಲ. ಸದರಿ ಸ್ವತ್ತಿನ ಸರ್ವೆ ನಂ.1396 ಆಗಿರುತ್ತದೆ. ಸದರಿ ಸ್ವತ್ತಿನ ಸರ್ವೆ ನಂಬರನಲ್ಲಿ ಯಾವುದಾದರೂ ಭಾಗವಾಗಿದೆಯೇ ಎಂಬ ಬಗ್ಗೆ ನನಗೆ ಮಾಹಿತಿಯಿಲ್ಲ. ಜಕ್ಕೂಬಾಯಿ ಸಿಧ್ರಾಯಿ ಯಳ್ಳೂರಕರವರು ಕೃಷಿಯೇತರ ಭೂಮಿಯಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಿದ ಮತ್ತು ಅದರ ಆದೇಶದ ನಂಬರ್ ಮತ್ತು ದಿನಾಂಕ ನನಗೆ ಗೊತ್ತಿಲ್ಲ. ಸದರಿ ಜಕ್ಕೂಬಾಯಿ ಸಿಧ್ರಾಯಿ ಯಳ್ಳೂರಕರವರು ಎನ್.ಎ ಆದೇಶವಾದ ನಂತರ

ಜಿಲ್ಲಾಧಿಕಾರಿಯವರಿಗೆ ಮುಂದುವರೆದು ಯಾವುದಾದರೂ ಅರ್ಜಿ ಸಲ್ಲಿಸಿರಬಹುದು. ನನಗೆ ಅದರ ಬಗ್ಗೆ ಮಾಹಿತಿಯಿಲ್ಲ. ಅಸಿಸ್ಟೆಂಟ್ ಡೈರೆಕ್ಟರ್ ಟೌನ್ ಪ್ಲಾನಿಂಗ್ ಬೆಳಗಾವಿ ಇವರಿಗೆ ಅರ್ಜಿ ಸಲ್ಲಿಸಿರಬಹುದು ಅದರ ಬಗ್ಗೆ ನನಗೆ ಮಾಹಿತಿಯಿಲ್ಲ. ಸದರಿ ಜಕ್ಕೂಬಾಯಿ ಸಿಧ್ರಾಯಿ ಯಳ್ಳೂರಕರವರು ತಾವು ಖರೀದಿಸಿದ ಸ್ವತ್ತಿನಲ್ಲಿ 12 ಪ್ಲಾಟಗಳನ್ನು ಮಾಡಿದ್ದರು. ಸದರಿ ಪ್ಲಾಟಗಳನ್ನು ಮಾಡುವಾಗ ಜಿಲ್ಲಾಧಿಕಾರಿಯವರು ಶರತ್ತುಗಳನ್ನುನ ವಿಧಿಸಿದ್ದರು ಅಂದರೆ ಸರಿ. ಜಕ್ಕೂಬಾಯಿ ಸಿಧ್ರಾಯಿ ಯಳ್ಳೂರಕರವರಿಂದ ನನ್ನ ತಂದೆ ಎರಡು ಪ್ಲಾಟಗಳನ್ನು ಖರೀದಿಸಿದ್ದು ಅವುಗಳ ನಂಬರ್ 1363ಃಬಿ 6 ಮತ್ತು 1363ಃ 9 ಇರಬಹುದು. 1363ಃಬಿ 6 ಇದು ಹಳೆಯ ನಂಬರ್ ಆಗಿದ್ದು ಈಗಿನ ನಂ.4855ಃ56 ಆಗಿರುತ್ತದೆ . ಜಕ್ಕೂಬಾಯಿ ಸಿಧ್ರಾಯಿ ಯಳ್ಳೂರಕರವರಿಂದ ನನ್ನ ತಂದೆ ಖೇರಿದಿ ಮಾಡಿದ ಖರೀದಿ ಪತ್ರವನ್ನು ದಾವೆಯಲ್ಲಿ ಹಾಜರುಪಡಿಸಿರುತೆನೆ . ನಿಡಿ - 6 ಮರಾಠಿ ಭಾಷ್ಷೆಯಲ್ಲಿದ್ದು ಅದರ ತರ್ಜುಮೆ ಪ್ರತಿ ನಿಡಿ-6 (ಎ )ಆಗಿದೆ ಅಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.